**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 855/2019**

**ಪಿ ಡಬ್ಲ್ಯೂ - 1**

**ಸಿ ಡಬ್ಲ್ಯೂ 2**

**ದಿಃ 30.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಸಿದ್ದರಾಜ್**

**ತಂದೆಯ ಹೆಸರು ಃ ಗಂಗಯ್ಯ**

**ವಯಸ್ಸು ಃ 54 ವರ್ಷ**

**ಉದ್ಯೋಗ ಃ ವ್ಯವಸಾಯ**

**ವಿಳಾಸ ಃ ಕತ್ತಿಹೊಸಹಳ್ಳಿ, ದೊಡ್ಡಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ಸಾಕ್ಷಿಯು ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನು. ನನಗೆ ನಿಪಿ-1 ರಲ್ಲಿನ ವಿಚಾರ ತಿಳಿದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**( ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**ವಾಟೀ ಸವಾಲುಃ ಸ ಸ ಅ ರವರಿಂದಃ**

ದಿ.05.06.2019 ರಂದು ರಾತ್ರಿ 8-00 ಗಂಟೆ ಸಮಯದಲ್ಲಿ ನಾನು, ಚಾಸಾ-3 ಪೊಲೀಸ್ ಠಾಣೆಯ ಮುಂಭಾಗ ನಡೆದುಕೊಂಡು ಹೋಗುತ್ತಿದ್ದಾಗ ಚಾಸಾ-4 ನಮ್ಮನ್ನು ಕರೆದು ಹಾದಿರಿಪುರ ಗ್ರಾಮದ ಚಂದ್ರ ಬಿನ್ ಚಿಕ್ಕಮುನಿಯಪ್ಪ ನವರ ದನದ ಕೊಟಿಗೆ ಮನೆಯಲ್ಲಿ ಕೆಲವರು ಕಾನೂನು ಬಾಹಿರವಾಗಿ ಹಣವನ್ನು ಪಣವಾಗಿ ಕಟ್ಟಿಕೊಂಡು ಅಂದರ್-ಬಾಹರ್ ಎನ್ನುವ ಜೂಜಾಟ ಆಡುತ್ತಿದ್ದಾರೆಂದು ಡಿ ಸಿ ಪಿ ಸಾಹೇಬ್ರಿಗೆ ಮಾಹಿತಿ ಬಂದಿದ್ದು, ದಾಳಿ ಮಾಡಲು ಡಿ ಎಸ್ ಪಿ ಸಾಹೇಬ್ರು ಸ್ಥಳಕ್ಕೆ ಬರುತ್ತಿದ್ದು, ನಮ್ಮನ್ನು ಪಂಚರಾಗಿ ಬರಲು ಕೇಳಿಕೊಂಡರು ಎಂದರೆ ಸರಿಯಲ್ಲ. ಅದರಂತೆ ನಮ್ಮನ್ನು ಕೆಎ-04-ಜಿ-973 ಜೀಪಿನಲ್ಲಿ ಸಿಬ್ಬಂದಿಗಳೊಂದಿಗೆ ಕರೆದುಕೊಂಡು ರಾತ್ರಿ 8-15 ಗಂಟೆಗೆ ಇದ್ದಾಗ

ಅಲ್ಲಿಗೆ ಡಿಎಸ್ ಪಿ ರವರು ರಾತ್ರಿ 8-30 ಗಂಟೆಗೆ ಬಂದು ಜೀಪ್ ನ್ನು ಮರೆಯಾಗಿ ನಿಲ್ಲಿಸಿ ನೋಡಿದಾಗ ಕೊಟಿಗೆಯ ಮನೆಯ ಬಾಗಿಲು ಮತ್ತು ಕಿಟಕಿ ಸಂಧಿಗಳಿಂದ ಇಣುಕಿ ನೋಡಿದಾಗ ಅಲ್ಲಿ ವಿದ್ಯುತ ಬೆಳಕಿನಲ್ಲಿ ಐದು ಜನರು ವೃತ್ತಾಕಾರವಾಗಿ ಕುಳಿತು ಮದ್ಯದಲ್ಲಿ ಒಂದು ಪ್ಲಾಸ್ಟಿಕ ಪೇಪರ್ ನ್ನು ಹಾಕಿಸಿಕೊಂಡು ಅದರ ಮೇಲೆ ಇಸ್ ಪೀಟ್ ಎಲೆಗಳನ್ನು ಮತ್ತು ನಗದು ಹಣ ಹಾಕುತ್ತಾ ರೂ.500 ಅಂದರ್ ರೂ.500 ಬಾಹರ್ ಎಂದು ಜೋರಾಗಿ ಕುಗಿಕೊಂಡು ಹಣ ಪಣವಾಗಿಟ್ಟು ಜೂಜಾಟ ಆಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ದಾಳಿ ಮಾಡಿದಾಗ ಒಬ್ಬನು ಹಿಂಬದಿ ಬಾಗಿಲಿನಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದನು, ಉಳಿದ ನಾಲ್ವರನ್ನು ಹಿಡಿದುಕೊಂಡು ಪೊಲೀಸರು ಅವರನ್ನು ವಿಚಾರಿಸಿದಾಗ ಅವರುಗಳು ಈ ನ್ಯಾಯಾಲಯದ ಮುಂದಿರುವ ಆರೋಪಿಗಳಾಗಿದ್ದು, ಮತ್ತೊಬ್ಬ ಕೊಟಿಗೆಯ ಮಾಲೀಕನಾದ ಚಂದ್ರ ಬಿನ್ ಚಿಕ್ಕಮುನಿಯಪ್ಪ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಂತರ ಪ್ಲಾಸ್ಟಿಕ್ ಪೇಪರ್ ಮೇಲೆ ಇಟ್ಟಿದ್ದ ರೂ.53,150/- ಜೂಜಾಟಕ್ಕೆ ಬಳಸಿದ 52 ಇಸ್ ಪೀಟ್ ಎಲೆಗಳನ್ನು ಒಂದು ಪ್ಲಾಸ್ಟಿಕ್ ಪೇಪರ್ ನ್ನು ರಾತ್ರಿ 8-30 ರಿಂದ 9-00 ಗಂಟೆಯವರೆಗೆ ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮು ಮಾ ಗಳು ನ್ಯಾಯಾಲಯದ ಮುಂದೆ ಇದ್ದ ಕಾರಣ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಯಿತು )**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**